# ಶ್ರೀ ಪ್ರಸನ್ನವೆಂಕಟದಾಸರ ಕೃತಿಯಲ್ಲಿ ಜಾನಪದ ಸೊಗಡು

ಶ್ರೀಮತಿ ರೇಖಾ ಕಾಖಂಡಕಿ

ದಾಸಪರಂಪರೆಯಲ್ಲಿ ಬಂದ ಮಹಾ-ಮಹಿಮರೆಲ್ಲ ಭಕ್ತಿಯ ಉಗಮದ ಒರತೆಯನ್ನು ತಮ್ಮೆದೆಯ ಆಳದಲ್ಲಿ ಇಟ್ಟುಕೊಂಡಂತೆ ಆ ಒರತೆಯಿಂದ ಬಂದ ನಾನಾ ವಿಧ ಕೀರ್ತನೆಗಳು, ಉಗಾಭೋಗಗಳು, ಸುಳಾದಿಳು, ಭಕ್ತಿಯ ನಾನಾ ರೀತಿಯ ಆಯಾಮಗಳಲ್ಲಿ ತತ್ವ ಸಿದ್ಧಾಂತಗಳನ್ನು ಪಂಚಭೇದಗಳನ್ನು ಮೈಗೂಡಿಸಿಕೊಂಡು ಅನೇಕ ಆಕರಗಳಲ್ಲಿ ಬಂದಿವೆ.

ಹಾಗೇಯೇ "ಶ್ರೀ ಪ್ರಸನ್ನವೆಂಕಟ"ದಾಸರ ಕೃತಿಗಳಲ್ಲಿ ಕೂಡ ಭಕ್ತಿಯ ಮೂಲ ಸ್ವರೂಪ ಹರಳುಗಟ್ಟಿನಿಂತಿವೆ. ದಾಸ ಪರಂಪರೆಯಲ್ಲಿ ವಿಶಿಷ್ಟವಾಗಿನಿಂತವರಲ್ಲಿ ಶ್ರೀ ಪ್ರಸನ್ನವೆಂಕಟದಾಸರು ಕೂಡ ಒಬ್ಬರು. ಅವರು ಸಾವಿರಾರು ಕೃತಿಗಳನ್ನುಬರೆದರೂ ನಮಗೆ ಲಭ್ಧವಾಗಿದ್ದು 559 (ಪ್ರಕಟ + 150 ಅಪ್ರಕಟ) ಕೃತಿಗಳು ಮಾತ್ರ. ಅದರಲ್ಲಿ ವಿಶೇಷವಾದ ಕೃತಿಗಳು ಶ್ರೀ ಪ್ರಸನ್ನವೆಂಕಟ ದಶಮ ಸ್ಕಂಧ ಭಾಗವತ ಪೂರ್ವಾರ್ಧ, ಸಮಸ್ತ ಮಣಿಗಣಷಟ್ಪಚರ ಪದ್ಯಮಾಲ (ಕನ್ನಡದ ಮೊದಲ ವಿಷ್ಣು ಸಹಸ್ರ ನಾಮವೆಂದೆ ಪ್ರತೀತಿ), ನಾರಾಯಣ ಪಂಜರ, ಭೇದಮುಕ್ತಾವಲಿ (ಪಂಚಭೇದ ತತ್ವಗಳಸಾರ), ಸತ್ಯಭಾಮಾವಿಲಾಸ, ನಾರದ ಕೊರವಂಜಿ ವೇಷ ತಾಳ್ದ ಚರಿತ್ರೆ.

ಇತ್ತೀಚೆಗೆ ಅವರ ಅಪ್ರಕಟಿತ ಕೃತಿಗಳು ಕೆಲವು ಸಿಕ್ಕು ಅದರಲ್ಲಿ "ಕಾಲಜ್ಞಾನ" ಎಂಬ ಇಪ್ಪತ್ತೈದು ನುಡಿಗಳ ವಿಶೇಷ ಕೃತಿಯೂ ಕೂಡ ಒಂದು. ಪ್ರಸ್ತುತ ಇದರಲ್ಲಿ ಇವತ್ತಿನ ಕಾಲಮಾನಕ್ಕೆ ನಡೆಯುವ ಧರ್ಮ-ಅಧರ್ಮದ ಜನರ ವಿಚಿತ್ರ ರೀತಿ-ನೀತಿಗಳ ವಿವರಣೆಯ ಪರಿಯನ್ನು ದಾಸರು ಎರಡನೂರು ವರ್ಷಗಳ ಹಿಂದೆಯೇ ಚಿತ್ರಿಸಿದ್ದು. ಅವರು ಚಿತ್ರಿಸಿದ ಸಮಾಜದ ರೀತಿ-ನೀತಿ ನಡುವಳಿಕೆಗಳು ಇವತ್ತಿನ ಮಟ್ಟಿಗೆ ಪ್ರತ್ಯಕ್ಷ ಕಾಣುತ್ತಿದ್ದುದು, ವಿಚಿತ್ರವಷ್ಟೇ ಅಲ್ಲ ವಿಸ್ಮಯಕೂಡ.

ಈಗ ಶ್ರೀ ಪ್ರಸನ್ನವೆಂಕಟದಾಸರ ಕೃತಿಗಳಲ್ಲಿ ತಮ್ಮ ಗಣನೆಗೆತರುತ್ತಿರುವ ಕೃತಿ "ನಾರದ ಕೊರವಂಜಿ ವೇಷ ತಾಳ್ದ ಕಥೆ" ಇದು ಕೂಡ ದಾಸರ ಕೃತಿಗಳಲ್ಲಿ ವಿಶೇಷವಾಗಿ ವಿಶಿಷ್ಟವಾಗಿ ನಿಂತ ಕೃತಿಯೇಸರಿ.

ಪ್ರಸ್ತುತದಾಸರ ಕೃತಿಗಳಲ್ಲಿ ಅಲಂಕಾರ ಭಾಷೆ, ರೂಢಿಗತ ಭಾಷೆ, ಬಾಲಭಾಷೆ, ಪ್ರೌಢಭಾಷೆಗಳಲ್ಲಿ ಭಗವಂತನ ನಾನಾ ರೂಪ, ಅವತಾರ, ಅವನ ಲೀಲೆಗಳು ವರ್ಣಿಸುವಂತೆ ಜಾನಪದ ಸವಿಯನ್ನು ಕೆನೆಗಟ್ಟಿಕೊಂಡು ನಿಂತಿದೆ. ಇದು ದಾಸರ ವಿಶೇಷ ಕೃತಿಗಳಲ್ಲಿ ಬಹಳ ಅದ್ಭುತವಾಗಿ ಮೂಡಿ ಬಂದ ಕೃತಿ. "ನಾರದ ಕೊರವಂಜಿ ವೇಷ" ಹೆಸರೆ ಹೇಳುವಂತೆ ಕೊರವಂಜಿ ರೂಪ ಎನ್ನುವದೇ ಒಂದು ಜಾನಪದ ರೂಪ, ಇದರಲ್ಲಿ ರಾಗ, ತಾಳಗಳನ್ನು ಕೂಡಿಕೊಡ ಮೂವತ್ನಾಲ್ಕು ಪದ್ಯಗಳಿವೆ, ತೊಂಬತ್ತೊಂಬತ್ತು ನುಡಿಗಳಿವೆ. ಇದರಂತೆ "ಭೇದಮುಕ್ತಾವಲಿಯೂ" ಕೂಡ ಪಂಚಬೇಧಗಳ ಸತ್ವವನ್ನಡಗಿಸಿಕೊಂಡ ಒಂದು ಕೋಲಾಟದ ಜಾನಪದ ಶೈಲಿಯ ಕೃತಿಯೆ. ಇದು ಬೀಗರ ಮುಯ್ಯದ ಹಾಡಿನ ರೀತಿಯಲ್ಲಿದ್ದು, ಸಮಸ್ತ ತತ್ವ ಸಿದ್ಧಾಂತಗಳು ಪಾಕಗೊಂಡು ನಿಂತಿವೆ. ಆದರೆ "ನಾರದ - ಕೊರವಂಜಿ ರೂಪ" ಮಾತ್ರ ಅಪ್ಪಟ ಜಾನಪದದ ಸೊಗಡಿನಿಂದ ಭಕ್ತಿ ಭಾವದ ಭದ್ರ ಬುನಾದಿಯಾಗಿ ಅದರಲ್ಲಿ ಭಗವಂತನ ಮಹಿಮೆ ಸಾಕಾರಗೊಂಡು ನಿಂತಂತಿದೆ.

ಯಾವುದೇ ಕೃತಿಯು ಪ್ರಾರಂಭದಲ್ಲಿ ಹರಿಯಿಂದಲೇ ಹರಿಗೆ ಹರಿಗಾಗಿಯೇ ಎನ್ನುವಂತೆ

Created with nitro PDF professional
download the free trial online at nitropdf.com/professional

ಸಮರ್ಪಣ ಭಾವದಲ್ಲಿ ಕೃತಿ ಸುರುವಾಗುತ್ತದೆ. ಮೊದಲು ಹರಿಯ ಹತ್ತು ಅವತಾರಗಳ ಜಯ ಜಯ ಕಾರದಿಂದಲೇ ಸುರುವಾಗುತ್ತದೆ.

**"ಜಯ ಜಯ ಜಯ ಜಯ**
**ಶ್ರೀರಮಾರಮಣ ಜಯ ಶ್ರೀಕರಗುಣಾಬ್ಧಿ ಜಯ**
**ಶ್ರೀರುಕ್ಮಿಣೀಶಜಯ ಶ್ರೀ ಶ್ರೀನಿವಾಸ ಜಯ**

ಎಂದು ಜಯುದ ಮುನ್ನುಡಿ ಹಾಡುತ್ತ **"ದುರುಳ ದ್ವತ್ಯರು ಸೊಕ್ಕಿರೆ ಧರೆಗೆ ಕಂಬನಿ ತರಿಸಲು ತ್ವರದಿ ಸುರರಿಗೆ ಮೊರೆ ಇಟ್ಟಳು ಧರಿಸಲಾರೆನು ಎನುತಲಿ"** ಇದು ಕೃತಿಗೆ ಮುನ್ನುಡಿ ತರುವಂತೆ ಕಾರಣೀಕ ವಾಗುವಂತೆ ಕೃತಿ ರಚಿಸಲು ಕಾರಣವಾದ ಹಿನ್ನೆಲೆಯಾಗಿ ನಿಂತಿದೆ. ಅಲ್ಲದೆ ಇದು ಕೃಷ್ಣಾವತಾರದ ಒಂದು ರಹಸ್ಯದ ಹಿನ್ನೆಲೆಕೂಡ. ಅಸುರ ಪಾಪಿಗಳ ದುರುಳತನವನ್ನು ಹೊರಲಾರೆ ಎಂದು ಹುಯಿಲಿಡುವ ಭೂತಾಯಿಯು ಭಾರವನ್ನು ಭಗವಂತ ಇಳುಹಬೇಕಿದೆ.

ಶ್ರೀ ಕೃಷ್ಣನ ಅವತಾರದಲ್ಲಿ ಅವನ ರುಕ್ಮಿಣೀಯ ಕಲ್ಯಾಣದೊಡನೆ ಜಗತ್ ಕಲ್ಯಾಣ ಆಗಬೇಕಿದೆ. ಶ್ರೀ ಕೃಷ್ಣನೆ ತನ್ನ ಪತಿಯೆಂದು ಹಗಲು-ರಾತ್ರಿ ಆರಾಧಿಸುತ್ತ ಇರುವ ರುಕ್ಮಿಣಿಗೆ ಅಣ್ಣ ರುಕ್ಮಿ-ಶಿಶುಪಾಲನಿಗೆ ತನ್ನತನ್ನು ಧಾರೆ ಎರೆದು ಕೊಡುವ ಮಾನಾಡಿದಾಗ ಅದರಿಂದ ನೊಂದ ರುಕ್ಮಿಣಿ, ಶ್ರೀಕೃಷ್ಣನೇ ಬ್ರಾಹ್ಮನೋರ್ವನೊಡನೆ ಶ್ರೀಕೃಷ್ಣನು ಬಂದು ತನ್ನನ್ನು ಕಾಪಾಡಿ ಕರೆದೊಯ್ದು ಅವನೆ ತನಗೆ ಪತಿಯಗಬೇಕೆಂದು ತೋರಿ ಓಲೆ ಕಳಿಸಿದ ಮೇಲೆ ಅವಳು ಕೃಷ್ಣನು ಬರುವನೋ ಇಲ್ಲವೋ, ಬಂದು ತನ್ನನ್ನು ಕರೆದೊಯ್ದು ಲಗ್ನವಾಗುತ್ತನೋ ಇಲ್ಲವೋ ಎಂಬ ಬೇಗುದಿಯಲ್ಲಿರುವಾಗ ಪರಮ ಭಗವದ್ಭಕ್ತರಾದ ನಾರದರು ಅವಳ ತೋಳಲಾಟ-ವನ್ನು ಹೋಗಲಾಡಿಸುಗೊಸುಗ ಮತ್ತೆ ಶ್ರೀ ಕೃಷ್ಣನು ಬಂದು ಅವಳನ್ನು ಕರೆದೊಯ್ದು ಕಲ್ಯಾಣ-ವಾಗುತ್ತಾನೆ ಎನ್ನುವ ಆಶ್ವಾಸ ಕೊಡುವದಕ್ಕಾಗಿ ಆ ಜಗತ್ ಕಲ್ಯಾಣಕ್ಕೆ ಕಾರಣ ಭೂತರಾಗಿ ಇದೊಂದು ಭಗವತ್ ಸೇವೆ ಎಂದು ಇದನ್ನು ಮಾಡಿ ತಾವು ಪುಣ್ಯ ಕಾರ್ತಮಾಡಬೇಕೆಂದು ತಾವೇ ಕೊರವಂಜಿ ವೇಷಧರಿಸಿ ವಿದರ್ಭ ದೇಶಕ್ಕೆ ಹೋಗುವ ಒಂದು ಸಂದರ್ಭದನ್ನು ದಾಸವರ್ಯರು ಬಹಳ ರಚವತ್ತಾಗಿ ವರ್ಣಿಸಿ ರಚಿಸಿದ ಕೃತಿ ಇದು.

**ಕೃತಿಯ ವಿವರಣೆ** : ಮೊದಲ ಮೂರು ನುಡಿಗಳಲ್ಲಿ ಶ್ರೀಹರಿಯು ದಶಾವತಾರದ ವರ್ಣನೆಯಾದರೆ ಮುಂದಿನ 7 ನುಡಿಗಳಲ್ಲಿ ಭೂದೇವಿ ಕಂಬನಿ ತುಂಬಿ ಸುರರಿಗೆ ಮೊರೆ ಇಟ್ಟಾಗ ದೇವಋಷಿನಾರದರು ಶ್ರೀಪದಸೇವೆಗೊಸಗ ಕೊರವಿಯು ಭಾವದಲ್ಲಿ ಬಣ್ಣಿಸಿ. ಈ ಇಂಗಿತವನರಿತ ನಾರದರು ಕೊರವಂಜಿಯ ವೇಷ ಧರಿಸಿ ಬರುವದು. ಮುಂದಿನ ಮೂರು ನುಡಿಗಳಲ್ಲಿ **"ಕೊರವಂಜಿ ವೇಷ ಧರಿಸಿ ಧರೆಗಿಳಿದು ದನಕ ಭೀಷ್ಮನ ಉಪವನದಲ್ಲಿ ನಿಲಿಸಿ ಮತ್ತೆ ಹಲವು ಕೊರವಿಯರ ಕೂಡಿ ಇಳೆಯ ಜನರು ಮೋಹಿಸುವಂತೆ ಉಡುಗೆತೊಟ್ಟು ಚೆಲುವೆ ಒಪ್ಪಿದಳು"** ಎನ್ನುವ ವರ್ಣನೆ ಇದೆ.

ಮುಂದಿನ ಮೂರುನುಡಿಗಳಲ್ಲಿ **"ಕೊರವಿ ಬೆಡಗಿನಗಮನದಿಂದ ಅಡಿಗೊಮ್ಮೆ ತಿರುಮಳ ಬಿಡೆಯನ ನೆನೆಯುವ** ಕೊರವಿಯಗತ್ತಿನಲ್ಲಿ ಬರುವ ಪರಿ ಜೋಳಿಗೆಯಲ್ಲಿ ಮಗುವನೆತ್ತಿ ನಗರದ ಜನರಿಗೆ ಕೌತುಕವೆನಿಸುವಂತೆ ಬಗೆ ಬಗೆಯ ಒಗಟು ಮಾತುಗಳನ್ನಾಡುತ್ತ ನಗರಾಧಿಪತಿಯ ಮನೆ ಕೇಳಿ ಬಂದ ವೆಂಕಟ ಕೃಷ್ಣಗೆ ಕೈ ಮುಗಿದುನಿಂತಳು**"**.

ಇಲ್ಲಿ ಕೊರವಿ ವೇಷ ಧರಿಸಿದವರು ಭಗವದ್ಭಕ್ತ ನಾರದರು, ಅದಕ್ಕೆ ಅಡಿಗಡಿಗೆ ನಾರಾಯಣನ ನಾಮವ ಜಪಿಸುವಂತೆ ಶ್ರೀಹರಿಯ ನಾಮವನ್ನು ಜಪಿಸಿದ್ದಾರೆ. ಬ್ರಾಹ್ಮಣ ಕೇರಿಗೆ ಬಂದ ಕೊರವಿ ಪರಬ್ರಹ್ಮನಗುರುತು ಹೇಳುತ್ತಾಳೆ. ಇಲ್ಲಿ ನಮಗೆ ತಕ್ಷಣಗಮನಕ್ಕೆ ಬರುವದು ಶ್ರೀನಿವಾಸ ಕಲ್ಯಾಣದಲ್ಲಿ ಸ್ವತಃ ಶ್ರೀನಿವಾಸನೆ ತನ್ನ ಕಲ್ಯಾಣಕ್ಕಾಗಿ ಕೊರವಂಜಿ ವೇಷಧರಿಸಿ ಆಕಾಶ ರಾಜನ ಪಟ್ಟಣಕ್ಕೆ ಬರುವದು ಇಲ್ಲಿ ಪರಬ್ರಹ್ಮನನ್ನು ಕಂದನನ್ನಾಗಿಸಿ ತನ್ನ ಜೋಳಿಗೆಯಲ್ಲಿಟ್ಟು ಕೊಂಡು ಬಂದರೇ ಭಗವದ್ಭಕ್ತರಾದ ನಾರದರು.

Created with nitro PDF professional
download the free trial online at nitropdf.com/professional

ಗುರುವಿನೋಪಾದಿಯಲ್ಲಿ ಪರಬ್ರಹ್ಮನ ಗುರುತು ಹೇಳುತ್ತಾರೆ. ಕೊರವಿಯ ಮಾತಿನಲ್ಲೆ **ನಮ್ಮಮ್ಮ – ನಮ್ಮಜ್ಜಿ, ನಮ್ಮವ್ವೆ ನೀಡೆಂದು** ಹೇಳುವ ಕೊರವಿಯ ಭಾಷೆಯ ಪರಿ ಗಮನೀಯವಾದದ್ದು ಅಲ್ಲದೆ ಕೊರವಂಜಿಯ ವೇಷವನ್ನು ಕೂಡ ಅಲಂಕಾರಿಕವಾಗಿ ಕೊಡುತ್ತಾಹೋಗುತ್ತಾರೆ. ಅವಳ ವೇಷ ಭೂಷಣವನ್ನು ವರ್ಣಿಸುತ್ತ**ಮುಂಜುಗಾವಿಯ ಸೀರೆಯುಟ್ಟು ಕೆಂಜಾಡೆ ಬಿಟ್ಟೋರೆ ದುರುಬಿನಿಟ್ಟು, ಪಂಜಿನೊಲೆಯ ಮೂಗುತಿ ಬಾಲೆ ಇಟ್ಟು ಅಡಿಗಡಿಗೆ ಝುಣ ಝುಣವೆಂದು ಗೆಜ್ಜೆ ಕಾಲಿನ ಸದ್ದು ಮಾಡುತ್ತ ರಾಜಬೀದಿಯಲ್ಲಿ ನಿಂತು ಅವಳ'ಮಾತು ನಡೆ, ನುಡಿ ಕೊರವಿಯ ರೀತಿ ನೀತಿಗೆ ತಕ್ಕಹಾಗೆ ನಮ್ಮಮ್ಮ , ನಮ್ಮವ್ವೆ ನೀಡೆಂದು”** ಬೇಡುವದೇ ಅವಳ ಕಾಯಕ ಎನ್ನುವಂತೆ ಅಂತಃಪುರದ ಅಂಚೆಗೆ ಬಂದು ನಿಂತಾಗ ಅಂತಃಪುರದ ಅಂತರಂಗದ ಸಖಿಯರು ಅರಸಿಗೆ "**ಓರ್ವ ಕಾಲಜ್ಞಾನ್ನ ಪೇಳುವ ಕೊರಚಮ್ಮ ಬಂದಾಳೆಂದು**" ಹೇಳಿ ಅಂತಃಪುರಕ್ಕೆ ಅವಳನ್ನು ಕರೆಸುತ್ತಾರೆ. **ಬಂದಳು ನೃಪನರಮನೆಗೆ ನಿಂದಲ್ಲಿ ನಿಲ್ಲದೆ ಕಿಲಿ–ಕಿಲಿ ನಗುತಾ** ನಾರದರ ಮೂಲ ರೂಪವೇ ಮರೆತು ಹೋಗುವಂಥಹ ಕೊರವಂಜಿಯ ರೂಪಧಾರನೆ ಅತ್ಯದ್ಭುತ ಅವಳ ವೇಷ – ಭೂಷಣಗಳ ಅಲಂಕಾರಗಳ ಮಾತು ಮಾತಿಗೆ ನೀಡೆಂದು ಬೇಡುವ ಬಗಲ ಜೋಳಿಗೆಯಲ್ಲಿ ಕೂಸನ್ನುಕಟ್ಟಿ ಕೊಂಡು ಬರುವ ಪರಿ ದಾಸರು ವರ್ಣಿಸಿದ ರೀತಿ ಅನನ್ಯವಾದದ್ದು.

"**ಕೃಷ್ಣನಂಗನೆಯನ್ನು ಕಾಣುವೆನೆಂಬ ಹರುಷದಿಂದ ಬಂದಿದ್ದಾರೆ ಕೊರವಂಜಿ ರೂಪದ ನಾರದರು**". ಮುಂದೆ ಮೂವತ್ತಾರನೇ ನುಡಿಯಲ್ಲಿ ಮನಸ್ಸಿನಲ್ಲಿ ಆಗಾಧ ಹಂಬಲ ತುಂಬಿಕೊಂಡು ಬರುವ ಆಕೆ "**ಎಲ್ಲಹಳು ರಾಯರಮಗಳು ಎಲ್ಲಿಹಳೆಂದು ನೀಡೆಯವ್ವ ಬಲ್ಲೆ ನಾನು ನಿನ್ನ ಮನಸ್ಸಿನ ಅಂತರಂಗದ ಆಶೆಯನ್ನು**" ಇದು ಬರಿ ರುಕ್ಮಿಣಿಯ ಅಂತರಂಗದ ಆಶೆಯಲ್ಲ ಭಗವದ್ಭಕ್ತರಾದ ನಾರದರ ಆಶೆಕೂಡ, ಹಗಲು, ರಾತ್ರಿ, ನಾರಾಯಣನನ್ನು ನೆನೆಯುವ ಅವರ ಮನಸ್ಸು ಹರಿಭಕ್ತಿಯಾದ ರುಕ್ಮಿಣಿಯ ಮನಸ್ಸಿನ ಹಂಬಲವನ್ನು ಹೇಳುತ್ತದೆ. ಮತ್ತೆ ಹೇಳುತ್ತಾರೆ.

"**ನಾವು ಹೇಳುವ ಸೊಲ್ಲ ಕೇಳಿ ನನಗೆ ಒಳ್ಳೊಳ್ಳೆಯ ಪದಾರ್ಥಗಳನ್ನು ನೀಡು**” ಎಂದು ಬಗೆ ಬಗೆಯ ಬೇಡಿಕೆಗಳನ್ನಿಡುತ್ತಾರೆ. **ಕನ್ಯೆ ಬಾರೇ ಮುಂದಕವ್ವಾ ನಿನ್ನ ಪ್ರಾಣದ ಪ್ರಿಯನೊಬ್ಬನೆ ಪರದೈವ ಶ್ರೀಕೃಷ್ಣ ನಿನ್ನವನೇ**" ಎನ್ನುವ ಭರವಸೆ ಕೊಡುವ ಮಾತು. ಮುಂದಿನ ನುಡಿಗಳಲ್ಲಿ ಕೊರವಿಯ ಮಾತನ್ನು ಕೇಳುತ್ತ ರುಕ್ಮಿಣಿದೇವಿ, ಕೊರವಿಗೆ ಆಸನವ ಇಕ್ಕೆ "**ಎಲ್ಲಿಂದ ಬಂದೇಯೇ ದೇವಲೋಕದ ಕೊರವಿ**" ನನಗೆ ಮೆಚ್ಚಿಗೆಯಾದ ಮಾತನ್ನೆ ಹೇಳಿದೆ. ರುಕ್ಮಿಣಿಗೆ ಗೊತ್ತು ಇಂಥ ತನಗೆ ಮನದುಂಬುವ ಮಾತನ್ನು ಹೇಳುವವರು ದೇವಲೋಕದವರಲ್ಲದೆ ಮಾತ್ಯಾರು ಅದು ಭಗವದ್ಭಕ್ತರ ಮಾತೆ ಎಂದು **ಕುಳ್ಳಿರೇ ಕುಳ್ಳಿರೇ ಕೊರವಂಜಿ** ಎನುತ ನನ್ನ ಮನದಾಶೆ ಬಗ್ಗೆ ಹೇಳು ಎನ್ನಲು ಕೊರವಂಜಿ ರುಕ್ಮಿಣಿಯ ಆದರದ ಮಾತು ಕೇಳಿ ಕೊದಂಡಪಾಣಿ ತಿರುವೆಂಗಳ ಮೂರ್ತಿಯ ಪಾದಕ್ಕೆ ವಂದನೆ ಮಾಡಿ ರುಕ್ಮಿಣಿಯನ್ನು ಕರೆಯುತ್ತಾಳೆ. "ಜಾಣೆ ಬಾರೆ ವಾಣಿಪತಿ ಪಿತ ಪ್ರಸನ್ನವೆಂಕಟ ಕೃಷ್ಣನಾಣೆ ಇಲ್ಲಿ ತಾನು ಬಂದಿದ್ದೆ **“ನೀನ್ನ–ಕೃಷ್ಣನ ಕಲ್ಯಾಣಕ್ಕೆ ಭರವಸೆಕೊಡಲು ಎಂದು ವಾಣಿಪತಿ ಪಿತ ವಾಣಿಪತಿ ಬ್ರಹ್ಮನ ಪಿತ ನಿನ್ನ ಕೃಷ್ಣನೆ ಆ ಕೃಷ್ಣನ ರಾಣಿ ನೀನು”** ಎಂದು ಮೊದಲೇ ಸೂಚನೆ ಕೊಟ್ಟು ಬಿಡುವದರ ಸಂಕೇತದ ಮಾತು ಹೇಳಿಬಿಡುತ್ತಾರೆ. ಇದು ಅವಳ ಜಾಣ್ಮೆಯನ್ನು ತೋರಿಸುತ್ತದೆ.

"**ಅಮ್ಮ ರುಕ್ಮಿಣಿಯಮ್ಮ ಮನಸ್ಸಿನ ದುಃಖ–ಕ್ಲೇಶಬಿಟ್ಟು, ಉಮ್ಮಶಬಿಟ್ಟು, ಸಂತಸದಿಂದ, ನನಗೆ ಮುತ್ತಿನ ರತ್ನದ ಕಾಣಿಕೆಕೊಡು ತಾಯಿ ಕೃಷ್ಣನ ನಮಿಸಿ ನಿನ್ನ ಮನೋರಥವ ಹೇಳು”** ಎಂದು ಅವಳ ಮನಸ್ಸಿನ ಹಂಬಲ ಗೊತ್ತಿದ್ದರೂ ಕೇಳುತ್ತಾಳೆ ಕೊರವಿ. ಆದರೂ ನಿನ್ನ ಆಶೆ ಹೇಳೆಂದು ಮತ್ತೆ ಅವಳ ಆಶೆಯ ಮೂಲವನ್ನು ತಾನು ಕಂಡವಳಂತೆ ಹೇಳುತ್ತಾಳೆ. "**ಉಂಟ ಊಟ ಕಂಡಕನಸು ಪುಂಡರೀಕಾಂಬೆಯ ತಂಡ–ತಂಡದ ನಿನ್ನ ಮನಸ್ಸಿನ ಎಲ್ಲ ವಾತೆಯ ಪೇಳುವೆ ಕಾಸಿಗಾಸೆಯವಳು ನಾನಲ್ಲ ಭಾಷೆಪಾಲಕರು**

Created with nitro PDF professional
download the free trial online at nitropdf.com/professional

**ನಮ್ಮಸಿದ್ದರೆಲ್ಲ ತಿರುಮಲೇ ತಿರುವೆಂಗಳನೆ ನನ್ನ ಮನೆದೈವ** ಎನ್ನುತ್ತ ಕೊರವಿ ಭಗವಂತನ ಎಲ್ಲ ಅವತಾರಗಳ ವರ್ಣನೆಮಾಡುತ್ತ ಅವರೆಲ್ಲ ನನ್ನ ಕುಲದೇವರು ಎನ್ನುವ ಮೂಲರೂಪದ ನಾರದರು ಭಗವಂತನನ್ನು ಆರಾಧಿಸುವ ಪರಿ ಆಗಾಧವಾಗಿದೆ. ಎಷ್ಟು ಸುಂದರವಾಗಿ, ಸ್ಪಷ್ಟವಾಗಿ, ರಸವತ್ತಾಗಿ ಮೂಡಿಸುತ್ತ ಹೋಗುತ್ತಾರೆ ಎಂದರೆ ಕೊರವಿ ಹೇಳುವ ಮಾತಿನಲ್ಲಿ ಎಂಥಹ ಔಚಿತ್ಯವಿದೆ. **ಇಂತಿಪ್ಪ ಎನ್ನ ಮನೆದೈವ** ಅವರಂತವ ಬೊಮ್ಮರಿವರವ್ವಾ ನಾನು ಆ **ಕಂತುವಿನಣ್ಣನ ಮಗಳವ್ವ ಹದಿನಾಲ್ಕು ಲೋಕ ತಿರುಗಿದವಳು**(ನಿಜ ಹದಿನಾಲಕು ಲೋಕವನ್ನು ತಿರುಗುವವರು ನಾರದರೊಬ್ಬರನ್ನು ಬಿಟ್ಟರೆ ಇನ್ನಾರು) ದೇಶದ ಸುದ್ಧಿಅರಿತವಳು, ನಿನಗೆಬೇಕಾದ ಸಿದ್ಧಿಯನ್ನೆ ಹೇಳುತ್ತೇನೆ ಎನ್ನುವ ರುಕ್ಮಿಣಿಯ ಅಂತರಂಗ–ಕೊಪ್ಪುವ ಮಾತನ್ನೆ ಹೇಳುತ್ತಾಳೆ. **ನಿನ್ನಂತರಂಗದ ಸ್ವಾಮಿ ಶ್ರೀಕೃಷ್ಣ ಯಾವಾಗದ್ವಾರಕೆಯಿಂದ ಬಪ್ಪನೆಂದು ಕೂಡ ಹೇಳುತ್ತೇನೆ** ಕೇಳೆ

ಕೊರವಿಂಯ ಮಾತಿನಲ್ಲೆ ಒಂದು ಚಮತ್ಕಾತವಿದೆ. ನಾ ತಿರುಗಿ ಬಂದ ದೇಶ ಐವತ್ತಾರು ಅಂಗ, ವಂಗ, ಕಳಿಂಗ, ಕಾಂಬೋಜ ಬ್ರಹ್ಮಾಂಡದ ದೇಶ–ದೇಶಗಳ ವರ್ಣನೆಯನ್ನು ಮಾಡುತ್ತಾ ಹೋಗುತ್ತಾಳೆ. **ಈಗ ವೈದರ್ಭ ದೇಶದೊಳ್ ಕುಂಡಿನಾಪುರದೊಳ್ ನಿನ್ನ ಗುರುತವ ಕೇಳಿ ಸಾಗಿಬಂದೆ ಸುಂದರಿಯೆ** ಎಂದು ಹೇಳುವ ಮಾತಿನಲ್ಲಿ ತಾನು ಸಾಧಿಸುತ್ತಿರವ ಕಾರ್ಯದ ಗುರುತರ ಹೊಣೆಯಿದೆ ಎಂಬಂತೆ ಚಮತ್ಕಾರದಿಂದ ಮಾತಡುತ್ತಾಳೆ ದಾಸರ ಭಾಷೆಯ ಲಾಲಿತ್ಯವೆ ವರ್ಣನೆಗೆ ಎಟುಕದಂಥಹದು ಹರಿ ಅವರನ್ನು ಹೇಗೆ ಕರೆದೊಯ್ದನೆಂಬ ರೀತಿಯನ್ನು ಬಣ್ಣಿಸುವಾಗ ಶಬ್ಧಗಳೇ ಅಲ್ಲಿ ನರ್ತನ ಗೈದಂತಿವೆ. **ರಂಗರಾಯನು ಮೋಹರದಿ ಮಣಿರಥವನೇರಿ ಬರುತ್ತಾನೆ. ನಿನ್ನಂದಣ ನೋಡಿ ಜಗಿವನಲ್ಲಿಂದ ಮೃಗೇಂದ್ರನಂದದಿ ನರಿಯ ಹಿಂಡಿನಿಂದ ಆನೆಯನ್ನು ಒಯ್ಯುವ ತೇರದಿ ಹರಿ ನಿನ್ನನ್ನಪ್ಪಿ ಕೊಂಡು ಹಾರುವ ಗರುಡ ಅಮೃತಕಲಶವ ಸುರರ ಗೆದ್ದು ಹರುಷದಿಂದ ಒಯ್ಯುವಂತೆ ದುಗುಡವ್ಯಾಕೆ ಬಾಲಕಿ ಹುಸೆಯಲ್ಲ ನನ್ನ ಕಣಿ ಕೃಷ್ಣ ಬಂದನೆಂದು ಬಹನೆಂದು ನುಡಿದೆ ಬರುತಿದೆ** ಎನ್ನ ಭವಿಷ್ಯ ಸೂಚಕ ಮಾತನ್ನು ಹೇಳುತ್ತಲೇ ಕೊರೆವಿ ಮತ್ತೆ ಮತ್ತೆ ನೀಡೆಯವ್ವ ಎಂದು ಆಧ್ಯಾತ್ಮಿಕ ರೀತಿಯಲ್ಲಿ ತನ್ನ ಗಂಡನ ಸಂಸಾರದ ಬಂಧುಗಳ ನಂಟರ ಈ ದೇಹ ಪಂಚೇಂದ್ರಿಯಗಳ ನಾಡಿಗಳ ವರ್ಣನೆ ಮಾಡುತ್ತ ಇಂಥಹ ಜಂಜಾಟದ ನಡುವೆ ಮೂರರ ಹಾದಿ ಮೆಟ್ಟಿ ಬಂದು (ಮೂರ್ಲೋಕದ ಹಾದಿ) **ಆರೂರು ಅರಸನ ಮೊರೆಬಿದ್ದು ವೈದರ್ಭದೇಶದೊಳ್ ನಿನ್ನ ಗುರುತವ ಕೇಳಿ ಬರೆದ** ಎನ್ನುವ ಮಾತಿನಲ್ಲೆ ನಿನ್ನ ಮೂಲಕ ಆ ಭಗವಂತನನ್ನು ಕಾಣಲು ಬಂದ ಪರಿಯನ್ನು ಹೇಳುತ್ತಾಳೆ.

ಇಂಥ ಆಧ್ಯಾತ್ಮದ ನುಡಿ ಹೇಳಿ ಕಂತು–ವಿನಯ್ಯನ ಕಾಂತಿಯ ಸಂತಸಪಡಿಸಿ ಅಂತರಂಗದಿ ಚಿಂತಾಯ ತನನ್ನು ನೆನದು ಭ್ರಾಂತಿಪರವಶಳಾಗಿ ಕೆಂಜೆಡೆಯ ತೂಗಿ ತೂಗಿ ಅಂತದೊಳ್ ಅತ್ಯಂತ ತೊಳಂತುಂಬಿ ಭಗವಂತನು ಅವಳನ್ನು ಹೇಗೆ ಎತ್ತಿಕೊಂಡು ಹೋಗುತ್ತಾನೆಂಬ ವರ್ಣನೆ ಮಾಡುತ್ತ ಹೋಗುತ್ತಾಳೆ.

ಇಲ್ಲಿ ದಾಸರ ಅಂತರಂಗ ಕೊರವಂಜಿಯ ಅಂತರಂಗವಾಗುತ್ತದೆ. ದಾಸರಿಗೆ ಭಗವದ್ ವರ್ಣನೆಯನ್ನು ಎಷ್ಟು ಮಾಡಿದರೂ ತೃಪ್ತಿಯಿಲ್ಲ ಕೊರವಂಜಿ ವೇಷದಲ್ಲಿದ್ದ ಒಬ್ಬ ಭಗವದ್ಭಕ್ತರ ಧ್ವನಿ, ಮನಸ್ಸು, ಹಂಬಲ, ಆಶೆ ಆರ್ತರನ್ ಎಲ್ಲದರ ಧ್ವನಿಯಾಗಿ ಪಂಚೇಂದ್ರಿಯಗಳಲ್ಲೂ ಅವನನ್ನೆ ತುಂಬಿಕೊಂಡು ಹೇಳುವ ಕೊರವಂಜಿಯ (ನಾರದರ) ಒಳ ಮಿಡಿತ ದಾಸರ ಅಂತರಂಗದ ಮಿಡಿತವಾಗಿದೆ ಇಲ್ಲದಿದ್ದರೆ ಇಂಥಹ ವರ್ಣನೆಯ ವೈಶಿಷ್ಟವನ್ನು ನಾವು ಹೇಗೆ ಕಂಡೇವು ?

ಕೊರವಂಜಿಮಾತಿಗೆ ಭಗವಂತನಿಗಾಗಿಯೇ ಹಂಬಲಿಸುತ್ತಿದ್ದ ರುಕ್ಮಿಣಿಯ ಮನದಾಳದ ಮಾತನ್ನು ತೆರೆದಿಟ್ಟಿದ್ದಾರೆ. **ಚೆನ್ನ ಕೊರವಂಜಿಯ ಮಾತು ಶ್ರೀ ಕನ್ಯೆ ಕೇಳಿ (ಇಲ್ಲಿ ಬರಿ ಕನ್ಯೆ ಎಂದು ಸಂಭೋದಿಸಿಲ್ಲ ಹರಿಯ ಪ್ರಾಣಪ್ರಿಯೆಯಾದ ಶ್ರೀ ಶ್ರೀಕನ್ಯೆ ಎಂದೆ ಸಂಭೋದಿಸಿದ ಮಾತು) ಮನ್ನಿಸಿ ಗುಣವ ಕೊಂಡಾಡಿ ಕೊರವಿಗೆ ನೀ ಬಲ ಸತ್ಯವ**

Created with nitroPDF professional
download the free trial online at nitropdf.com/professional

**ನುಡಿವೆ. ನಾನರಿವೆ ಮತ್ತೆ– ಮತ್ತೆ ಹೇಳುತ್ತಾಳೆ. ರುಕ್ಮಿಣಿ ನಂಬುತೆನೆ ನಿನ್ನ ಮಾತು ಕೆಳದಿ ಕೊರವಮ್ಮಾ** ಎಂದು ಹೇಳಿದರೂ ಮತ್ತೆ ಅನುಮಾನದ ಛಾಯೆ ಇದೆ. ಲೋಕಕ್ಕೆ ಒಪ್ಪುವ ಮಾತು ಆಡುತ್ತಾಳೆ. **ನಮ್ಮಂಬುಜಾಕ್ಷ ಬಾಹನೇನೇ ದೇವಿಕೊರನಮ್ಮಾ** ಎಂದಾಗ **"ಕೊರವಮ್ಮಾ ಮಗುವಿನ ಆಣೆ ನಾನಾಡಿದ ನಾಮದ ಆಣೆ"** (ಆ ನಾಮದ ಮೇಲೆ ಅಪಾರನಂಬುಗೆ ಇದೆ ಕೊರವಿಗೆ. ಯಾರನ್ನೂ ನಂಬದಿದ್ದರೂ ನಾಮದ ಬಲವನ್ನು ನಂಬು ಎನ್ನುವ ವೇದಾಂತದ ಮಾತಿದೆ. ಇಬ್ಬರೂ ಒಬ್ಬರಿಗೊಬ್ಬರು ಅಂತಂಕರಣ ಮಾತು ಕೇಳುತ್ತ ರುಕ್ಮಿಣಿ ಫಕ್ಕನೆನಿಂತು ನಿನ್ನ ಬಿಡಲಾರೆ ಗೆಳತಿ ಪ್ರೇಮ ಉಕ್ಕುತಿದೆ ನಿನ್ನ ಮೇಲೆ ನೀ ಹೋಗುವದೊಳಿತೆ?

ಇಬ್ಬರೂ ಇಲ್ಲಿ ಶ್ರೀಹರಿಯ ಭಕ್ತರು ಹರಿಚರಣವನ್ನ ನಂಬಿ ಬದುಕುವವರು ಜಗಜ್ಜನನಿಯಾದ ಶ್ರೀಲಕ್ಷ್ಮಿಕೂಡ ಹರಿಯ ಚರಣವನ್ನೆ ನಂಬಿದವಳು ಇದು ಒಬ್ಬರಿಗೊಬ್ಬರು ಸೇರಿದ ಭಕ್ತರಿದ್ದಾರೆ. ಇಲ್ಲಿ ಅಲೌಕಿಕ ಸುಖವಿದೆ. ಸಂತಸವಿದೆ ಇವರಿಬ್ಬರ ಸತ್ಸಂಗದಲ್ಲಿ ರುಕ್ಮಿಣಿಯ ಮಾತಿಗೆ ಕೊರವಿ ಅಪಾರನಂಬಿಕೆ ನೀಡಿ ಹೇಳುತ್ತಾಳೆ, **"ಶ್ರೀಗೋಪಾಲನು ಬಾಹಕನಿಲ್ಲೆ ಬರಲಾರದೆ ಇರಲಾರದೇ ಅವನು ನಿನ್ನ ವಿಯೋಗ ತಾಳಲಾರೆ ನೀ ನೆನೆದಾಗ ಬಾಹನೆಂಥೆ ಅನುರಾಗದಿಂದ ಆವಪರಿಯಿಂದಲೇ ಆಗಲಿ ಹರಿಸೇವೆ ಮಾಡಿ ಆನಿಜಾನಂದ ತೇವಿ"** ಇದು ಬರಿ ರುಕ್ಮಿಣಿಗೆ ಹೇಳುವ ಮಾತಲ್ಲ ಇದರ ಒಳಗಿನ ಸಣ್ಣ ಸುಳುಹು ಭಗವಂತ ಭಕ್ತರ ಆಧೀನ ಹರಿಸೇವೆಯನ್ನು ಯಾವ ಪರಿಯಿಂದಲೇ ಆಗಲಿ ಅನನ್ಯ ರೀತಿಯಿಂದ ಮಾಡಿದರೆ ಅವನು ಬರದೇ ಇರಲಾರ ಇದು ದಾಸವಾಣಿಯಲ್ಲಿ ಅಡಗಿರುವ ಮೂಲ ತತ್ವ ಈ ತತ್ವವನ್ನು ದಾಸರು ಇಡಿ ಪದ್ಯಗಳ ಉದ್ದಕ್ಕೂ ಹನಿಸಿಕೊಂಡು ಹೋಗಿದ್ದಾರೆ.

ಕೊರವಿ ರೂಪದಲ್ಲಿದ್ದ ಸುರಋಷಿ ಕೇಳ್ದ ವಕ್ಕಣಿಯ ಹರುಷದಿ ಕೇಳ್ದ ರುಕ್ಮಿಣಿಯ ಅರಸು ಪ್ರಸನ್ನವೆಂಕಟ ಕೃಷ್ಣ ನಿರುತದಿ ಜಯವ ನಮಗೀವ ಇಲ್ಲಿ ಕೊರವಂಜಿರೂಪದಲ್ಲಿದ್ದ ನಾರದರು ಶ್ರೀಹರಿ ಮತ್ತು ರುಕ್ಮಿಣಿಯ ಕಲ್ಯಾಣ ಮುನ್ಸೂಚನೆಯ ಸಂಕೇತ ನೀಡುವ ಪ್ರಸಂಗವನ್ನು ಅದನ್ನು ಕೇಳ್ದ ರುಕ್ಮಿಣಿಯ ಮನತುಂಬಿದ ಭಾವವನ್ನು ಕೇಳ್ದ ನಮಗೆಲ್ಲ ಆ ಭಗವಂತ ಜಯವನ್ನಿಯುವ ಎಂಬ ಮುಕ್ತಾಯದೊಡನೆ ಮುಗಿಸಿ **ಜಯ ಜಯ ಚಿನ್ಮಯ ಮೂರ್ತಿ** ಎಂದು ಜಗದಯ್ಯನನ್ನು ಕೊಂಡಾಡುತ್ತ ಶರಣು ಶರಣೆಂದರು. ಪ್ರಸ್ತುತ ಕೊರವಂಜಿ ಮತ್ತು ರುಕ್ಮಿಣಿಯ ಸಂವಾದದ ಈ ಕೃತಿ ಜಾನಪದ ಶೈಲಿಯ ಸೊಗರಿನಲ್ಲಿ ರಸವತ್ತಾಗಿ ಮೂಡಿ ಅದರಾಚೆ ಭಗವಂತ ಮಹಿಮೆಯ ವರ್ಣನೆಇದೆ.

ಶ್ರೀ ಪ್ರಸನ್ನವೆಂಕಟದಾಸರ ನಾರದ ಕೊರವಂಜಿ ವೇಷತಾಳ್ದ ಇದೆ ವಿಯಷಯದಲ್ಲಿ ಈ ಮೊದಲು ಶ್ರೀ ವಾದಿರಾಜರು ರಚಿಸಿದ ಇದೇ ಹೆಸರಿನ ಕೃತಿ ಇದೆ. ಭಾಗವತದ ಯಾವ ಸಂದರ್ಭದಲ್ಲಿ ಇದು ಬರುತ್ತದೆ ಎನ್ನುವದು ಜಿಜ್ಞಾಸೆ ಆದರೂ ಇದೊಂದು ಸೊಗಸಿನ ಕಲ್ಪನೆಯನ್ನು ಕೊಡುತ್ತದೆ. ಬಹುಶಃ ಶ್ರೀವಾದಿರಾಜರ ಕೃತಿ ಶ್ರೀ ಪ್ರಸನ್ನವೆಂಕಟದಾಸರ ಕೃತಿಗೆ ಪ್ರೇರಣೆಯಾಗಿರಲೂ ಬಹುದು ಸನ್ನಿವೇಷ ಸಂದರ್ಭಗಳ ವಿಷಯ ಒಂದೇ ಆದರೂ ಎರಡು ಕೃತಿಗಳಲ್ಲಿ ಭಾಷೆಯ ಲಾಲಿತ್ಯ ರೂಪ / ನಡೆ ವರ್ಣನೆ ಭಿನ್ನವಾಗಿ ಬಂದಿವೆ. ಮಹಾಭಾರತ ವೇದವ್ಯಾಸರಿಂದ ಮೂಲವಾಗಿ ಬಂದರೂ ಅನಂತರ ಬೇರೆ ಬೇರೆ ಕವಿಗಳು ಭಾರತವನ್ನೆ ಬರೆದರೂ ಕುಮಾರವ್ಯಾಸ ಭಾರತ ಜೈಮಿನಿ ಭಾರತ ಅವರದೆ ಆದ ಶೈಲಿ ಭಾಷೆ ಕಲ್ಪನೆಗಳಲ್ಲಿ ಭೀನ್ನ ಭಿನ್ನವಾಗಿ ತೊರಿ ಬೇರೆ ಬೇರೆರೀತಿಯ ಅನುಭವಗಳನ್ನು ಕೊಡುವಂತೆ ಶ್ರೀ ವಾದಿರಾಜರ ಹಾಗೂ ಶ್ರೀ ಪ್ರಸನ್ನವೆಂಕಟದಾಸರ ಒಂದೇ ವಿಷಯದಲ್ಲಿ

ಉದಾ : ಶ್ರೀ ವಾದಿರಾಜ ಕೃತಿಯಲ್ಲಿ ಪ್ರಾರಂಭದಲ್ಲಿ "**ಜಯ ಜಯ ದಯಾಕರನೆ ಹಯವದನ ಭಯಹರಣ**" ಎಂದು ಹರಿಯನ್ನು ಸ್ತುತಿಸಿ ನೇರವಾಗಿ ಕೊರವಂಜಿ ವೇಷ ಧರಿಸಿದ ನಾರದರು ರುಕ್ಮಿಣಿಗೆ ಪರಮ ಹರುಷ ನೀವನೆಂದು ನಾರದ ಬಂದ ಎನ್ನುವ ನೇರ ವಿಷಯಕ್ಕೆ

Created with nitro PDF professional
download the free trial online at nitropdf.com/professional

ಬರುತ್ತಾರೆ. ಅದೇ ಪ್ರಸನ್ನ–ವೆಂಕಟದಾಸರ ಕೃತಿಯಲ್ಲಿ "**ಜಯ ಜಯ ಜಯ ಶ್ರೀರಮಾರಮಣ ಜಯ ರುಕ್ಮಿಣೀಶ ಜಯ ಶ್ರೀ ಶ್ರೀನಿವಾಸ ಜಯ**" ಎಂದು ಜಯದ ಮುನ್ನುಡಿ ಹೇಳುತ್ತ ಹರಿಯ ಹತ್ತು ಅವತಾರಗಳ ವರ್ಣನೆ ಮಾಡುತ್ತ ನಂತರ "**ದುರುಳ ದೈತ್ಯರು ಸೊಕ್ಕಿನಲಿ ಧರೆಗೆ ಕಂಬನಿ ತರಿಸಲು ತ್ವರದಿ ಸುರರಿಗೆ ಮೊರೆ ಇಟ್ಟಳು ಧರಿಸಲಾರೇನು ಎನುತಲು**" ಆಗ ದೇವ ಋಷಿ ನಾರದರು ಶ್ರೀಪದ ಸೇವೆಗೋಸುಗ ಕೊರವಿಯು ಭಾವದಲ್ಲಿ ಜಗದಂಬೆ ರುಕ್ಮಿಣಿದೇವಿಯ ಬಳಗೈದಿ ದೇವ ನಿನ್ನಯ ಬರವ ಬೆಸೆಸಿದ ಎಂದು ಆರಂಭಮಾಡಿದ್ದಾರೆ.

ಶ್ರೀ ವಾದಿರಾಜರ ಕೃತಿಯಲ್ಲಿ ಸರಳವಾಗಿ ಹೋಗುತ್ತದೆ ಕೊರವಂಜಿ ವರ್ಣನೆ –

**ಕನಕಕುಂಡಲ ಕಾಂತಿಯಲಿ**
**ಗಂಡಭಾಗವು ಹೊಳೆಯುತ್ತ**
**ಕನಕಕಂಕಣ ನಾದಿಂದಲಿ**
**ಕಯ್ಯ ತೋರಿ ಕರೆಯುತ್ತ**

ಎಂದು ಕೊರವಿ ರಾಜಬೀದಿಯಲ್ಲಿ ನಡೆದು ಬರುವ ಸನ್ನಿವೇಶವಿದ್ದರೆ. ಶ್ರೀ ಪ್ರಸನ್ನವೆಂಕಟದಾಸರ ಕೃತಿಯಲ್ಲಿ ಅದೇ ಕೊರವಿಯ ಬರುವು ಹೀಗೆ......

**"ಮಂಜುಗಾವಿಯ ಸೀರೆ ನರಿತೆಗೆದುಟ್ಟು**
**ಕೆಂಜೇಡೆ ಬಿಟ್ಟೋರೆ ದುರುಬಿನಕಟ್ಟು**
**ಪಂಜಿನೊಲೆಯ ಮೂಗುತಿಯ ಬಲಿದಿಟ್ಟು**
**ಗುಲಗಂಜಿ ಹೊಂದಾಶೆ ಸರಗಳಳವಟ್ಟು**
**ಅಡಿಗಡಿಗೆ ಝುಣ ಝುಣವೆಂದು ನಡೆತಂದು**
**ಮಡದಿರಾಜ ಬೀದಿಯಲಿ ನಿಂದು**

ಎನ್ನುವ ಸಾಲುಗಳಲ್ಲಿ ಕೊರವಿಯ ನಿಜರೂಪದ ದರ್ಶನವಿದೆ ದಾಸರು ಇಲ್ಲಿ ಪದ್ಯಗಳ ರೀತಿಯನ್ನು ವಚನ ಚೂರ್ಣಿಕೆ ಎನ್ನುವ ಆಕರದಲ್ಲಿ ಬರೆದಿದ್ದಾರೆ. ಎಂದು ಸಮ್ಮಿಶ್ರಮಾಡಿ ಬರೆದಿದ್ದಾರೆ. ವಾದಿರಾಜರ ಕೃತಿಯಲ್ಲಿ ಪದ್ಯ–ಗದ್ಯ–ಪದ–ಗದ್ಯ ಎಂದು ಸಮಿಶ್ರ ಮಾಡಿ ಬರೆದಿದ್ದಾರೆ. ಆದರೆ ಇಬ್ಬರ ಕೃತಿಗಳಲ್ಲಿಯ ಭಾಷೆ ಅನನ್ಯವಾದ ಅಲಂಕಾರದಿಂದ ಕೂಡಿದೆ. ಜೊತೆಗೆ ಶ್ರೀವಾದಿರಾಜ ಕೃತಿಗಳಲ್ಲಿ ದ್ರಾವಿಡಭಾಷೆಯ ಅಂದರೆ ತೆಲುಗು–ತಮಿಳು ಭಾಷೆಯ ಬಳಕೆ ಬಹಳವಿದೆ.

**"ಬರುತಾನೆ ನಿನ್ನ ದುಂಡಿ ಬರುತಾನೆ" ಎನ್ನುತ್ತ**
**ಯಪ್ಪುಡು ವಚ್ಚನು – ಯಪ್ಪುಡು ಚೂಸ್ತನು**
**ತಪ್ಪಾ ಚಪ್ಪತಿನಿ ನೀವತಿ ಚಿಂತಿಂಚವದ್ದೂ**

ಎನ್ನುತ್ತ ಮತ್ತೆ "ಕನ್ನೂಲ ಕನ್ಯೆಮುಗ ಮೊಲುಮುಗ(?) ಮೈಕರ ಮೂಲೋಕರ–ಮೈರೋ(?)"

ಎಂದು ಮತ್ತ ಗದ್ಯದಲ್ಲಿ ಒಂಡೇ ರೆಂಡೇ ಮೂಡೇ ನಾಲ್ಗೇ ನಾಲ್ಗು ಘಂಟಲೋ ನಾಲ್ಕು ದಿನಾಲು ಕಾದು ನಾಲುಗೇಡುಗಾದು

ಹೀಗೆ ಅನೇಕ ಪದ್ಯ–ಗದ್ಯಗಳು ಕನ್ನಡದೊಡನೆ ಮಿಶ್ರೀತವಾಗಿವರ್ಣನೆಗೊಂಡ ಕೃತಿಗೆ ವಿಶೇಷ ಮೆರುಗು ನೀಡಿದೆ. ಅದರಂತೆ ಶ್ರೀ ಪ್ರಸನ್ನವೆಂಕಟದಾಸರ ಕೃತಿಯಲ್ಲಿ ಕೂಡ ದ್ರಾವಿಡ ಭಾಷೆಯ ಕನ್ನಡ ಕೊಪ್ಪುವಂತೆ ಜೋಡುಸಲ್ಪಟ್ಟಿದೆ.

**ಉದಾ :– "ಓ ರುಕ್ಮಿಣಿ ತಾ ಯಾರೆ ಎನ್ನ**
**ಮನಸಿಲೆ ನಿನ್ನ ಚ್ಚ ಕಾರ್ಯರಂಗಕ್ಕೆ ಕೈ**
**ಕ್ಕೊಡಿನಾಲ್ ಎನ್ನಕ್ಕೆ ಎನ್ನ ಸಂತೋಷಂ**
**ಪೆಣ್ಣಿರಾಯ  ಜಯಮ್ ಎನ್ನ ಪಾಣಯಗನ್**
**ಶ್ರೀಕೃಷ್ಣನ್ಂದೆ ಪೊಟ್ಟಣಿ ಕೈ ಪಿಡಿಚ್ಚಿ ಕಲ್ಯಾಣಂ**
**ಪಣ್ಣಿ ಕೊಳರಾಂ ಇಂದ ವಾರ್ತೆ ತಫಿನಾಲ್ ನಾಂ**
**ಕೊರ್ತಿಯೇ ಅಲ್ಲೆ ಎನ್ ತಮಯನ್ ರುಗ್ಮಂ**
**ವೇಕ್ಕತ್ತೆ ಕೊಲ್ಲರಿರಾನು ಜಯಮ್ ಇಂದ**
**ವಾರ್ತೆಯ್ದೆ ಪಣ್ಣಿಕೋ ಅಂದ"**

ಎಷ್ಟು ಸೊಗಸಾಗಿ ದಾಸರು ಅರ್ಥವಾಗುವ ರೀತಿಯಲ್ಲಿ ಅನ್ಯ ಭಾಷೆಯ ಸರಣಿಯನ್ನುಜೋಡಿಸಿ ಕೃತಿಯ ಅಂದ ಹೆಚ್ಚಿಸಿದ್ದಾರೆ. ಇವೆರಡು ಕೃತಿಗಳಲ್ಲಿ ಶ್ರೀ ಪ್ರಸನ್ನವೆಂಕಟದಾಸರ ಕೃತಿಯಲ್ಲಿ ಕೊರವಮ್ಮ ಕೃಷ್ಣ ಬರುತ್ತಾನೆ ನಿನ್ನನ್ನು ಕೈಹಿಡಿದು ಕರೆದುಕೊಂಡು ಹೋಗುತ್ತಾನೆ ಎಂಬ ಭರವಸೆ ಕೊಟ್ಟು ಹೋಗುತ್ತಾಳೆ. ಅಲ್ಲಿಗೆ ಜಯ ಜಯ ಚಿನ್ಮಯ ಮೂರ್ತಿ ನಿನಗೆ ಶರಣು ಎಂದು

Created with
nitroPDF professional
download the free trial online at nitropdf.com/professional

ಮುಕ್ತಾಯ ಮಾಡಿದರೇ ಶ್ರೀವಾದಿರಾಜ ಕೃತಿಯಲ್ಲಿ **“ಹರಿ ಬಂದು ರುಕ್ಮಿಣಿಯ ಹಾರೆತ್ತಿಕೊಂಡು ಪಿರಿಯಾದ ರಥದಲ್ಲಿಟ್ಟು ಜರಾಸಂಧಾದಿರಾಯರ ಗರ್ವಮುರಿದು ತೆರಳಿದನು ತಾನಾಗ”** ಎಂದು ಶ್ರೀಹರಿಯು ಬಂದು ರುಕ್ಮಿಣಿಯನ್ನು ರಥದಲ್ಲಿ ಕೂಡಿಸಿ ಹೋಗುವ ದೃಶ್ಯವನ್ನು ಕಟ್ಟಿ ಕೊಡುತ್ತ **“ಬಂದನಲ್ಲಮ್ಮಾ ಶ್ರೀ ಕೃಷ್ಣ ಬಂದನಲ್ಲಮ್ಮಾ ಚೆಂದದಿ ನಿನ್ನನ್ನು ಆನಂದದಿಂದ ಅಪ್ಪಿಕೊಂಡು ಎಂದೆಂದು ನಿನ್ನ ಬಿಡನು”** ಎನ್ನುತ್ತ **"ಅಪ್ಪುಡು ಶ್ರೀಕೃಷ್ಣಡು ಕೂಡಿಗೊನ್ನ ರುಕ್ಮಿಣಿ ದೇವಿನಿ ಕೂಚಿ ವಗವಿನ್ನಷ್ಟು ಕಾರ್ಯದೊಳಗನೂ"** ಎಂದು ಶ್ರೀಕೃಷ್ಣ –ರುಕ್ಮಿಣಿ ಜೊತೆಯಾಗಿರುವ ದೃಶ್ಯವನ್ನು ಹೇಳಿ ಅದು ನಿಜವಾದ ಬೇಯನ್ನು ತಿಳಿಸಿ ರುಕ್ಮಿಣಿಯ ಆಶೆ ಕೈಗೂಡಿ ಆಗಿ **"ಆಗ ರುಕ್ಮಿಣಿದೇವಿ ಕೊರವಿಯನು ಕರೆಸಿ ಸರ್ವಾಭರಣವನಿತ್ತು ಸಲ್ಲನೆ ನಕ್ಕು ಹೋಗಿಬಾ ಇನ್ನು ಕೊರವಂಜಿ ಎಂದು ನಿಜಪುರಿಯಲ್ಲಿ ಮಂಡಲ ಮಂದಿರದಲ್ಲಿ ನಿಜಜನರಿಗೆ ಸರ್ವಾಭೀಷ್ಟನೀವುತ್ತ ಜಯಪಾಂಡುರಂಗನ ಕೂಡಿ ಸಂತೋಷದಿಂದ ಬಾಳಿದಳು ಕಥೆಹೇಳಿ ಜಯ ಜಯ ದಯಾಕರನೆ”** ಎಂದು ಮುಕ್ತಾಯವಾಗುತ್ತದೆ.

ಇಲ್ಲಿ ಇಬ್ಬರೂ ಭಾಷೆಯನ್ನು ದುಡಿಸಿಕೊಂಡ ಬಗೆ ಅಪ್ರತಿಯವಾದುದು ವಿಷಯ ನಾರದ ಕೊರವಂಜಿ ವೇಷ ಆದರೂ ಎರಡು ಕೃತಿಗಳಲ್ಲಿ ನಾರದರ ಅಂತರಂಗದ ಮೂಲಕ ಭಗವಂತನ ಅವತಾರಗಳ ವರ್ಣನೆ ಅವನ ಲೀಲೆಗಳು ದುಷ್ಟ ಶಿಕ್ಷಣ–ಶಿಷ್ಟ ರಕ್ಷಣ ನೀತಿಯಲ್ಲಿ ಅವನ ಸರ್ವವ್ಯಾಪ್ತವನ್ನು ಬಣ್ಣಿಸಿದ್ದಾರೆ. ಅದು ಒಬ್ಬ ಭಗವದ್ಭಕ್ತ ಇನ್ನೊಬ್ಬ ಭಗವದ್ಭಕ್ತರ ಮೂಲಕ ಅವರ ಹೃದಯದಿಂದ ಮಾತನಾಡಲು ಸಾಧ್ಯ ಎನ್ನುವಂತೆ ನಾರದರ ಅಂತರಂಗ ಹೊಕ್ಕು ಮಾತನಾಡಿದ್ದಾರೆ. **ಭಗವಂತನ ಚಿತ್ತವೇ ವಿಶ್ವದ ಚೇತನ ಎನ್ನುವ ಸಾರ ಎರಡೂ ಕೃತಿಗಳಲ್ಲಿ ಅಡಗಿದೆ.** ಬರೆದಷ್ಟು, ಓದಿದಷ್ಟು, ಕೇಳಿದಷ್ಟು, ಕೃತಿಯ ವರ್ಣನೆ ಮುಗಿಯುವುದಿಲ್ಲ.ದಾಸಸಾಹಿತ್ಯ ಎನ್ನುವದು ಸಾಗರದ ಆಳದಷ್ಟು ಆಳವಾಗಿ ಹರಡಿಕೊಂಡಿದೆ. ಹಾಗೇ ಶ್ರೀ ಪ್ರಸನ್ನವೆಂಕಟರ ಸಾಹಿತ್ಯಕೂಡ, ಅವರು ಸಾವಿರಾರು ಕೃತಿಗಳನ್ನು ರಚಿಸಿದರೂಆ ಕೃತಿ ಸಾಗರದಲ್ಲಿ ಜನತೆಗೆ ಸಿಕ್ಕಿದ್ದು ಬೊಗಸೆಯಷ್ಟು ಮಾತ್ರ. ಹೀಗಾಗಿ ಅವರಕೃತಿಗಳ ಶೋಧನೆ ಇನ್ನು ಆಗಬೇಕಿದೆ. ಹಾಗೇ ಕೃತಿಗಳ ಒಳಶೋಧನೆಯ ಬಗ್ಗೆಯೂ ಅವುಗಳ ಸತ್ವವನ್ನು ಹಿಡಿದಿಡುವಲ್ಲಿ ಅಧ್ಯಯನಕಾರರು, ಸಂಶೋಧಕರು ಆಧ್ಯಾತ್ಮಿಕ ರೀತಿಯಲ್ಲಿ ಗಮನ ಹರಿಸಬೇಕಿದೆ ನಾನಿಲ್ಲಿ ಪ್ರಸ್ತುತಪಡಿಸಿದ್ದು ಸಾಗರದ ಒಂದು ಬಿಂದುವಿನಷ್ಟು ಮಾತ್ರ ಅದೂ ಬಿಂದುವಿನಲ್ಲಿ ಒಂದು ಬಿಂದು ಅಷ್ಟೇ.

**

Created with nitroPDF professional
download the free trial online at nitropdf.com/professional